ಅಳಗಿರಿನಾಯ್ಡು ಆಸ್ಥಾನದಲ್ಲಿ ಸ್ವಲ್ಪ ನೀರಿನ ಬಣ್ಣಗಳ ಚಿತ್ರಕಲೆಯ ಪಾಠವಾಗಿತ್ತು. ಅದರ ಮೇಲೆ ನಾನೂ ಸ್ವಂತವಾಗಿ ನಾನೇ ಚಿತ್ರಿಸಲು ಕಲಿತೆ. ಅದೇ ವಂಶಾವಳಿಯಾಗಿ ರವಿಗೂ ಬಂದಿರಲು ಸಾಧ್ಯ.

ರವಿಯ ತಾಯಿ ಉಮಾಂಬಾ ತಂಬ್‌ರಾತಿ ಒಳ್ಳೆಯ ನೃತ್ಯ ಕಲಾವಿದೆ ಮತ್ತು ಚಿತ್ರ ಕಲಾವಿದೆ ಕೂಡ. ಯಾವುದೋ ನೃತ್ಯ ಸಂಯೋಜನೆಗಾಗಿ ಪಾರ್ವತಿಯ ವಿವಾಹದ ದೃಶ್ಯವನ್ನು ಅವಳು ಅದೆಷ್ಟು ಚೆನ್ನಾಗಿ ಚಿತ್ರಿಸಿದ್ದಳು!

ರವಿಯ ತಂದೆ ಏಳುಮಾವಿಲ್ ಏನು ಕಡಿಮೆಯೇ? ಉದ್ದಾಮ ಸಂಸ್ಕೃತ ಪಂಡಿತನಲ್ಲವೇ? ಇಂತಹವರ ಮಗ ಎಂದ ಮೇಲೆ ಅವನೂ ಪ್ರತಿಭೆಯ ಸಾಕಾರವಾಗುವುದರಲ್ಲೇನು ಅಚ್ಚರಿ?

ನನ್ನ ಪ್ರಸನ್ನಗೊಂಡ ಮುಖಭಾವ ಕಂಡು ಪಾಚನ್ ದಿಗ್ಭ್ರಾಂತನಾದ. ನಾನು ಹಸನ್ಮುಖದಿಂದಲೇ ಹೇಳಿದೆ 'ಪಾಚನ್ ಹೋಗಿ, ಕೊಚ್ಚ್‌ವಿನ ತಾಯಿಯನ್ನು ಕರೆದು ತಾ'. ನಾನು ರವಿವರ್ಮನನ್ನು ಪ್ರೀತಿಯಿಂದ ಕೊಚ್ಚ್ (ಕಂದಾ) ಎಂದೇ ಕರೆಯುತ್ತಿದ್ದೆ. ಅವನಿಗೂ ನಾನೆಂದರೆ ಎಲ್ಲಿಲ್ಲದ ಪ್ರೀತಿ, ಭಕ್ತಿ.

ಉಮಾಂಬಾ ಬಂದವಳೇ ನಾನು ಚಿತ್ರಾವಲೋಕನದಲ್ಲಿ ಮುಳುಗಿರುವುದನ್ನು ನೋಡಿ 'ಕೊಚ್ಚ್ ಈ ರೀತಿ ಮಾಡುವನೆಂದು ನಾನೆಣಿಸಿರಲಿಲ್ಲ' ಎಂದಳು. ಅಪರಾಧಿಯ ದನಿಯಲ್ಲಿ.

'ಸದಾ ನನ್ನ ಚಿತ್ರಕಲೆಯನ್ನು ನೋಡುತ್ತಾ, ಅಪ್ಪನ ಪುರಾಣ ಕಥೆಗಳನ್ನು ಕೇಳುತ್ತಾ ಬೆಳೆಯುವ ಮಕ್ಕಳು ಬೇರೇನು ಮಾಡಲು ಸಾಧ್ಯ?'

'ಮುಂದೆ ಹೀಗಾಗದಂತೆ ನೋಡಿಕೊಳ್ಳುತ್ತೇನೆ. ಈಗ ಕ್ಷಮಿಸಿಬಿಡಣ್ಣ' ಉಮಾಂಬಾ ಬೇಡಿದಳು.

'ಏನೆಂದು? ಚಿತ್ರಿಸಬೇಡಿ ಎಂದೆ? ಉಮಾ ಇಲ್ಲಿ ನೋಡು ನಿನ್ನ ಮಗ ಎಂತಹ ಸುಂದರ ಚಿತ್ರಗಳನ್ನು ಇಷ್ಟು ಸಣ್ಣ ವಯಸ್ಸಿಗೇ ಚಿತ್ರಿಸಿದ್ದಾನೆ! ಎಲ್ಲಾ ಪ್ರಾಣಿಗಳಿಗಿಂತ ಚಿತ್ರಿಸಲು ತುಂಬಾ ಕಷ್ಟಕರವಾದದ್ದು ಕುದುರೆ. ಅದನ್ನೇ ಇವನು ಎಷ್ಟು ಸುಂದರವಾಗಿ, ಪ್ರಮಾಣಬದ್ಧವಾಗಿ, ಗಂಭೀರ ಭಾವದೊಂದಿಗೆ ಚಿತ್ರಿಸಿದ್ದಾನೆ ನೋಡು! ಇಂತಹ ಕಲೆಯನ್ನು ಬೇಡ ಎನ್ನಬಹುದೆ? ಇವನ ಸ್ವಾಭಾವಿಕ ಪ್ರತಿಭೆಯನ್ನು ಪರಿಷ್ಕರಿಸಬೇಕು; ಉತ್ತೇಜಿಸಬೇಕು' ಎಂದೆ.

'ನನ್ನ ಕೋಪವಿಲ್ಲದ ಮುಖ ಕಂಡು ಉಮಾಂಬಾಳಿಗೆ ನೆಮ್ಮದಿಯಾಗಿರಬೇಕು. ಶಾಂತ ದನಿಯಲ್ಲಿ ಹೇಳಿದಳು.

'ಅದಿರಲಿ, ಇವನು ಇದನ್ನೆಲ್ಲಾ ಎಲ್ಲಿ ಕಲಿತ?'

'ನಮ್ಮ ಲಾಯದಲ್ಲಿ ಆನೆ, ಕುದುರೆಗಳು ಇಲ್ಲವೇ? ಕಲಿಯಲು ಬುದ್ಧಿ, ಏಕಾಗ್ರತೆ, ಸುತ್ತಲಿನದನ್ನು ನೋಡುವ ವಿಶಾಲ ದೃಷ್ಟಿ ಬೇಕಷ್ಟೆ.'

'ಅದಿರಲಿ, ಮಕ್ಕಳೆಲ್ಲಿ?' ಕೇಳಿದಳು ಉಮಾ.

'ಪಾಚನ್, ಹೋಗಿ ಮಕ್ಕಳನ್ನು ಕರೆದು ತಾ'

ಹೊರಗೆ ಹೋದ ಪಾಚನ್ ಹಿಂತಿರುಗುತ್ತಾ ಹೇಳಿದ 'ಸ್ವಾಮಿ, ಮಕ್ಕಳು ಹವೇಲಿಯ ತೋಟದಲ್ಲೂ ಇಲ್ಲ, ಅವರು ದೇವಿಯ ಆಲಯದ ಕಡೆಗೆ ಹೋದರೆಂದು ಗಾರ್ಡ್ ಚೆಲ್ಲಪ್ಪ ಹೇಳಿದ.'

'ಅವರಿಗೆ ಬೆಳಗಿನ ಉಪಾಹಾರವಾಯಿತೇ?'

'ಇಲ್ಲ ಸ್ವಾಮಿ'

'ನಡೆ, ಹಾಗಾದರೆ ದೇವಾಲಯಕ್ಕೆ ಹೋಗಿ ಬರೋಣ. ಮಕ್ಕಳಿಗೂ ಹಸಿವಾಗಿರಬೇಕು, ಒಟ್ಟಿಗೆ ಕುಳಿತು ತಿಂದರಾಯಿತು. ನನ್ನ ಕೋಪಕ್ಕೆ ಹೆದರಿ ದೇವಾಲಯದಲ್ಲಿ ಅವಿತುಕೊಂಡಿರಬೇಕು.'

'ಕೊಡೆ ತರಲೆ ಒಡೆಯ?'

'ಬೇಡ' ಎನ್ನುತ್ತಾ ಮನೆಯಾಚೆ ಕಾಲಿಟ್ಟೆ. ಸೇವಕನೊಬ್ಬ ನನ್ನ ಮೆಟ್ಟು ತಂದಿಟ್ಟ. ಭತ್ತದ ಗದ್ದೆಗಳನ್ನು ತೆಂಗಿನ ತೋಟಗಳನ್ನು ದಾಟಿ, ದೇವಾಲಯಕ್ಕೆ ನಡೆದೆ. ಎಂದಿನಂತೆ ಆ ಪ್ರಕೃತಿ ದೇವತೆಯ ಬೆಳಗಿನ ಸೊಬಗನ್ನು ಸವಿಯಲು ನಿಲ್ಲಲಿಲ್ಲ. ನಾನು ದೇವಾಲಯಕ್ಕೆ ಪ್ರಾತಃಕಾಲದಲ್ಲೇ ಹೋಗಿಬಂದಿದ್ದೆ. ಎರಡನೆಯ ಬಾರಿ ಬಂದದ್ದು ಅಲ್ಲಿನ ಅರ್ಚಕರಿಗೆ ಆಶ್ಚರ್ಯ. ನಾನು ದೇವಿಯ ದರ್ಶನ ಪಡೆದು ಗುಡಿಯ ಪ್ರಾಂಗಣದಲ್ಲಿ ಸುತ್ತುತ್ತಾ ಅಲ್ಲಿನ ಬಿಳಿಯ ಗೋಡೆಗಳ ಮೇಲೆ ಇದ್ದಿಲಿನಲ್ಲಿ ರಚಿಸಿದ ಚಿತ್ರಗಳನ್ನು ನೋಡುತ್ತಾ ನಸುನಕ್ಕು 'ಇವುಗಳನ್ನೆಲ್ಲಾ ಯಾರು ಬರೆದರು?'

ನಡುಗುತ್ತಲೇ ಹೇಳಿದ ಅರ್ಚಕ 'ಚಿಕ್ಕ ಒಡೆಯರು ನಾನು ತಮಗೆ ಹೇಳಬೇಕೆಂದೇ...' 'ಮಕ್ಕಳೆಲ್ಲಿ?'

'ಸ್ವಲ್ಪ ಹೊತ್ತಿನ ಮೊದಲು ಇಲ್ಲಿಯೇ ಇದ್ದರಲ್ಲ!' ಮಕ್ಕಳು ಅಲ್ಲೇ ಬಚ್ಚಿಟ್ಟುಕೊಂಡಿರುವುದು ಖಾತ್ರಿಯಾಯಿತು.

'ರವಿಕೊಚ್ಚ್' ಕೂಗಿ ಕರೆದೆ. 'ಬೇಗ ಬಾ', ಹೆದರುತ್ತಲೇ ತಂಗಿಯ ಕೈಹಿಡಿದು ಬಂದ ರವಿವರ್ಮ. ನನ್ನನ್ನು ನೋಡಿದೊಡನೆ ಓಡಿ ಬಂದು ನನ್ನ ಕಾಲಿಗೆ ಬಿದ್ದ. ಮಂಗಳ ನನ್ನ ಪಂಚೆ ಹಿಡಿದು ಅಳತೊಡಗಿದಳು.

ನಾನು ರವಿಯನ್ನು ಮೇಲೆತ್ತಿ ಮೆಲ್ಲನೆ ಆಲಂಗಿಸಿಕೊಂಡು 'ನನ್ನ ಕಂದ, ಯಾಕೆ ಅಳುತ್ತಿದ್ದಿ?' 'ಮತ್ತೆ ಹೀಗೆ ಮಾಡುವುದಿಲ್ಲ'

'ಕೊಚ್ಚ್ ನೀನು ಮಾಡದೆ ಮತ್ತಾರು ತಾನೆ ಮಾಡಬಲ್ಲರು? ಬನ್ನಿ ಎಲ್ಲರೂ ಒಟ್ಟಿಗೆ ಉಪಾಹಾರ ಸ್ವೀಕರಿಸೋಣ. ಪಾಚನ್, ಈ ಚಿತ್ರಗಳನ್ನು ಯಾರೂ ಅಳಿಸಿಬಿಡದಂತೆ ನೋಡಿಕೋ' ಎಂದೆ. ನಾವು ಹಿಂತಿರುಗಬೇಕೆನ್ನುವಷ್ಟರಲ್ಲಿ ಆನೆಗಳ ಕತ್ತಿಗೆ ಕಟ್ಟಿದ ಘಂಟೆಗಳ ರವ ಕೇಳಿಸಿತು. ಗಜೇಂದ್ರ, ಅದರ ಮರಿ ಕಾಶಿ, ಇಬ್ಬರೂ ನದಿಯಲ್ಲಿ ಸ್ನಾನ ಮುಗಿಸಿ ಬರುತ್ತಿದ್ದರು. ಆನೆಗಳ ಸ್ನಾನದ ವೈಖರಿಯನ್ನು ಜ್ಞಾಪಿಸಿಕೊಂಡ ಮಕ್ಕಳು ಕಿಸಕ್ಕನೆ ನಕ್ಕರು. ನಾನೂ ಅವರೊಂದಿಗೆ ನಗುತ್ತಾ ಹವೇಲಿಯನ್ನು ಹೊಕ್ಕೆ.

ಅಡುಗೆಮನೆಯ ಬಾಗಿಲಲ್ಲಿ ನನ್ನ ಅಕ್ಕ ಲಕ್ಷ್ಮಿಬಾಯಿ ಎಲ್ಲರ ಉಪಾಹಾರದ ಮೇಲ್ವಿಚಾರಣೆ ಮಾಡುತ್ತಾ ನಿಂತಿದ್ದರು. ಎಂದಿನಂತೆ ಅವರವರ ಸ್ಥಳಗಳಲ್ಲಿ ಕುಳಿತೆವು. ಅಡುಗೆಯ ಬ್ರಾಹ್ಮಣ ವ್ಯಾಂಕು ಹೊಗೆಯಾಡುವ ಇಡ್ಲಿಗಳನ್ನು, ಹೊಸದಾದ ಬೆಣ್ಣೆಯನ್ನು ಬಡಿಸಿದ. ಉಮಾಂಬಾ ಸಾಂಬಾರ್ ಬಡಿಸಿದಳು. ಸಂಸ್ಕೃತ ಪಂಡಿತನಾದ ಏಳುಮಾವಿಲ್ ಮಂತ್ರಗಳನ್ನು ಪಠಿಸಿ, ಕಣ್ಮುಚ್ಚಿ ಪ್ರಾರ್ಥಿಸಿದ. ನಾನೂ ಮಕ್ಕಳೂ ಅಂತೆಯೇ ಕಣ್ಮುಚ್ಚಿ ಪ್ರಾರ್ಥಿಸಿದೆವು.

ತಿಂಡಿ ತಿನ್ನಲು ಆರಂಭಿಸಿದಾಗ ನಾನು ಅಕ್ಕನಿಗೆ ಹೇಳಿದೆ 'ನಮ್ಮ ಕೊಚ್ಚ್ ದೊಡ್ಡ ಚಿತ್ರಕಲಾವಿದನಾಗುತ್ತಾನೆ. ಅಲ್ಲವೇ ರವಿ?'

ರವಿ ಪಕ್ಕದಲ್ಲಿದ್ದ ಮಂಗಳಳ ಕಿವಿಯಲ್ಲಿ ಹೇಳಿದ್ದು ನನಗೆ ಕೇಳಿಸಿತು. 'ಅಳು ಮೋರೆ! ನಾನು ಹೇಳಲಿಲ್ಲವೆ ಮಾಮಾ ನಮ್ಮನ್ನು ಬಯ್ಯುವುದಿಲ್ಲ ಎಂದು' ತಂಗಿಯ ಮುಖ ನೋಡಿ ನಕ್ಕ ರವಿ.

ಆ ಸಂಜೆ ನನ್ನ ಚಿತ್ರಕಲಾ ಕೊಠಡಿಗೆ ಹೋಗಿ ರವಿವರ್ಮನನ್ನು ಕರೆದೆ. ರವಿವರ್ಮ ನನ್ನ ಕೊಠಡಿಗೆ ಬಂದಾಗ ನಾನು ಚಾಪೆಯ ಮೇಲೆ ಕುಳಿತು ಮಣ್ಣಿನ ಕುಡಿಕೆಗಳಲ್ಲಿ ಬಣ್ಣಗಳನ್ನಿಟ್ಟುಕೊಂಡು ಕುಳಿತಿದ್ದೆ. ಅಳಿಲ ಬಾಲದಿಂದ ತಯಾರಿಸಿದ ಅನೇಕ ರೀತಿಯ ಕುಂಚಗಳು ನನ್ನ ಮುಂದೆ ಇದ್ದವು.

'ಒಳಗೆ ಬಾ ಕೊಚ್ಚ್, ನೋಡು ಈ ನನ್ನ ಕಪಾಟಿನಿಂದ ಹಲವು ಹಳೆಯ ಕ್ಯಾನ್ವಾಸ್‌ಗಳನ್ನು ಕೊಡುತ್ತೇನೆ, ಅದರ ಹಿಂಭಾಗಗಳು ಖಾಲಿಯಿವೆ. ನಿನಗಾಗಿ ಈ ಬಣ್ಣಗಳು, ಕುಂಚಗಳನ್ನು ಇಲ್ಲಿ ಇಡುತ್ತೇನೆ. ನಿನಗೆ ಯಾವಾಗ ಬೇಕೋ ಆಗ ಬಂದು ಇದ್ದಿಲಿನ ಚೂರುಗಳಿಂದ ಚಿತ್ರ ರಚಿಸಿಕೊಂಡು ಬಣ್ಣಗಳನ್ನು ಹಚ್ಚು.'

ರವಿವರ್ಮನ ಮುಖ ಊರಗಲವಾಯಿತು. 'ಸ್ವರ್ಗಕ್ಕೆ ಮೂರೇ ಗೇಣು' ಎನ್ನುವಂತಹ ಸಂತಸ. ನಾನು ಮತ್ತೆ ಹೇಳಿದೆ 'ಈ ಬಣ್ಣಗಳನ್ನು ಹೇಗೆ ಮಿಶ್ರ ಮಾಡುವುದೆಂದು ನಾನು ತೋರಿಸುತ್ತೇನೆ. ಈ ಬಣ್ಣಗಳನ್ನು ಎಲೆ, ಹೂವು, ಬೇರು, ಮಣ್ಣು ಮತ್ತು ರಾಸಾಯನಿಕ ವಸ್ತುಗಳಿಂದ ಮಾಡಲ್ಪಟ್ಟಿವೆ. ಆದರೆ ಪ್ರತಿಯೊಬ್ಬ ಚಿತ್ರಕಾರನೂ ತನ್ನದೇ ಬಣ್ಣಗಳನ್ನು ಸೃಷ್ಟಿಸಬೇಕು. ಅವನಿಗೆ ಕಣ್ಣುಗಳಿದ್ದರೆ ಮಾತ್ರ ಸಾಲದು. ಅಂತರದೃಷ್ಟಿ ಇರಬೇಕು. ನೋಡಿದ್ದನ್ನು ಗ್ರಹಿಸುವ ಶಕ್ತಿ ಇರಬೇಕು.

'ನಾನು ನಿನ್ನನ್ನು ಸ್ಟುಡಿಯೋಗೆ ಬಿಡಬೇಕಾದರೆ ನೀನು ಹಲವು ವಾಗ್ದಾನಗಳನ್ನು ಮಾಡಬೇಕು. ಬೆಳಿಗ್ಗೆ ತಂದೆಯವರಿಂದ ವೇದಪಾಠಗಳು, ಪ್ರಾರ್ಥನೆ ಕಲಿಯಬೇಕು, ಶಾಲೆ ತಪ್ಪಿಸಿಕೊಳ್ಳಬಾರದು, ಅಮ್ಮನ ನೇತೃತ್ವದಲ್ಲಿ ನೃತ್ಯ ಕಲಿಯಬೇಕು, ಎಲ್ಲಕ್ಕಿಂತ ಮುಖ್ಯವಾಗಿ ಗೋಡೆಗಳ ಮೇಲೆ ಚಿತ್ರ ಬಿಡಿಸುವುದನ್ನು ಮಾಡಲೇಬಾರದು. ಹಾಗಿದ್ದರೆ ಮಾತ್ರ ನನ್ನ ಈ ಚಿತ್ರರಚನಾ ಕೋಣೆಗೆ ನಿನಗೆ ಪ್ರವೇಶ, ತಿಳಿಯಿತೇ?' ಸ್ವಲ್ಪ ದನಿಯೇರಿಸಿ ಹೇಳಿದೆ. ರವಿವರ್ಮ ಸಂತಸದಿಂದ ಒಪ್ಪಿಕೊಂಡ. ಅಂತೆಯೇ ನಾಲ್ಕು ವರ್ಷಗಳು ಉರುಳಿದ್ದು ತಿಳಿಯಲೇ ಇಲ್ಲ.

ಅವನ ಮೊದಲ ಚಿತ್ರ ಕೇಸರಿಬಣ್ಣದ ಎಲೆ ಕಣ್ಣು ಕೋರೈಸುವಂತೆ ಮೂಡಿಬಂದಿತ್ತು. ನನ್ನ ಅಪ್ಪಣೆ ಸಿಕ್ಕ ಮೇಲೆ ರವಿವರ್ಮನ ಚಿತ್ರಕಲೆ ದಿನೇದಿನೇ ಪ್ರವರ್ಧಮಾನಕ್ಕೆ ಬರತೊಡಗಿತು. ಆದರೂ ನನ್ನ ಮನದ ಮೂಲೆಯಲ್ಲಿ ಒಂದು ಭಾವನೆ ಉದಯಿಸಿತು. ಕಿಳಿಮಾನೂರಿನಲ್ಲಿಯೇ ಉಳಿದರೆ ರವಿವರ್ಮನ ಪ್ರತಿಭೆ ಅರಳುವುದಿಲ್ಲ ಎಂತಲೇ ಉಮಾಂಬಾಳಿಗೆ, ಏಳುಮಾವಿಲ್‌ಗೆ ಹೇಳಿದೆ.

'ತಿರುವಾಂಕೂರಿನ ಮಹಾರಾಜ ಆಯಿಲ್ಯ ತಿರುನಾಳರಿಂದ ಆಹ್ವಾನ ಬಂದಿದೆ. ಅವರು ನನ್ನ ಸಂಬಂಧದ ಹುಡುಗನಿದ್ದರೆ ಕರೆದು ತರುವಂತೆ